# ಬಯಲಿಗೆ ಬಯಲರ್ಥ



ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಕಲೆ: ಬಸವರಾಜ ಕಲೆಗಾರ

ಶರಣರು ನಡೆಸಿದ ಅನುಭಾವಿಕಗಳೇ ಅನುಭವ ಮಂಟಪಗಳು. ಸ್ಥಾವರ ವಿರೋಧಿಗಳಾದ ಶರಣರು ಎಲ್ಲೂ ಅನುಭವ ಮಂಟಪವೆನ್ನುವ ಆಲಯವನ್ನು ಕಟ್ಟಲಿಲ್ಲ. ಬಯಲಿನಾಲಯದೊಳಗೆ ಬಯಲ ಜಂಗಮವಾಗಿ ಅನುಭವ ಮಂಟಪ ಮೂಡುತ್ತಿತ್ತು.

ಬಯಲು ಎಂಬ ಪದಕ್ಕೆ ಏನೇ ಅರ್ಥ ಹೇಳಿದರೂ ಅದು ಬಯಲಿನ ಪೂರ್ಣಾರ್ಥವನ್ನು ಹೇಳುವುದಿಲ್ಲ. ಬಯಲು ಅಂದರೆ ಏನೂ ಇಲ್ಲದಿರುವುದು; ಏನೆಲ್ಲವನ್ನೂ ತುಂಬಿಕೊಳ್ಳಬಹುದಾದುದು. ಬಯಲಿಗೆ ರೂಪವಿಲ್ಲ, ಅದು ಅರೂಪಿ. ಅದು ಕಂಡರೂ ಕಂಡಷ್ಟೇ ಅಲ್ಲ; ಕಾಣುತ್ತಿರುವುದೂ ಅಲ್ಲ. ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಇದನ್ನು ಶಕ್ತಿ ಇದ್ದಷ್ಟು ಪರಿಭಾವಿಸಬಹುದು. ಅರ್ಥೈಸಲಾಗುವುದಿಲ್ಲ. ಅಲ್ಲಮ ಪ್ರಭುಗಳ ಈ ವಚನವನ್ನು ಗಮನಿಸಿ:

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ಬಯಲ ಜೀವನ ಬಯಲ ಭಾವನೆ.
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.

ಈ ವಚನಕ್ಕೆ ಏನು ಅರ್ಥ ಹೇಳಲು ಸಾಧ್ಯ? ಅರ್ಥಕ್ಕಿಂತ ಪರಿಭಾವನೆಯಲ್ಲಿ ಬಯಲ ಬಗೆಯನ್ನು ಅನುಭವಕ್ಕೆ ಆಗುಮಾಡಿಕೊಳ್ಳಬಹುದು. ಏನೂ ಇಲ್ಲದೆ ಏನೂ ಇಲ್ಲವಾಗುವ ಈ ಬಯಲ ತತ್ತ್ವವನ್ನು ಅರಿಯಬೇಕೆಂದರೆ ಇದಕ್ಕೆ ವಿರುದ್ಧವಾದ ಪದದ ಅರ್ಥವನ್ನು ಗ್ರಹಿಸಿದರೆ ಸಾಕು, ಅದರ ಮಿತಿಯಲ್ಲಿ ಇದರ ವ್ಯಾಪ್ತಿಯನ್ನು ಅರಿವಿಗೆ ತಂದುಕೊಳ್ಳಬಹುದು ಅನ್ನಿಸುತ್ತದೆ. ಬಯಲಿಗೆ ವಿರುದ್ಧವಾದ ಪದ ಆಲಯ ಎಂದಿಟ್ಟುಕೊಂಡರೆ, ಆಲಯಕ್ಕೆ ಆಕಾರವಿದೆ. ಆ ಆಕಾರ ಒಂದೇ ಅಲ್ಲ; ಅನೇಕ. ಕಟ್ಟಿದಂತೆ ಆಲಯ, ಕೊಟ್ಟಂತೆ ರೂಪ. ಆಲಯ ಸ್ಥಾವರ, ಅದು ಮನುಷ್ಯ ಸೃಷ್ಟಿ ಅಥವಾ ಯಾವುದೇ ಜೀವಿಯ ಸೃಷ್ಟಿ. ಆಲಯಕ್ಕೆ ಅಳಿವಿದೆ. ಆಲಯದ ರೂಪವನ್ನು ಬದಲಿಸಬಹುದು. ಇರುವುದನ್ನು ಕಳೆದು ಇನ್ನೊಂದು ರೂಪು ಕೊಡಬಹುದು. ಅಂದರೆ ಒಂದನ್ನು ಇಲ್ಲವಾಗಿಸಿ ಇನ್ನೊಂದನ್ನು ಇರವಾಗಿಸುವುದು. ಅದನ್ನೂ ಕಡೆದು ಮತ್ತೊಂದನ್ನು ಕಟೆಯಬಹುದು. ಇದೆಲ್ಲವೂ ಇರುವ ಭೂಮಿಯ ಮೇಲೆ ಕಲ್ಪಿಸಬಹುದಾದ ಕಟ್ಟಬಹುದಾದ ಆಕೃತಿ ರೂಪಗಳು. ಇವು ಆಲಯಗಳು ಜೀವಿ ತನ್ನ ಅನುಕೂಲಕ್ಕೆ ಸದ್ಯಕ್ಕೆ ಕಟ್ಟಿಕೊಳ್ಳಬಹುದಾದ ಮಾಡಿಕೊಳ್ಳಬಹುದಾದ ನಿಲಯಗಳು.

ಈ ಅರ್ಥದಲ್ಲಿ ಭೂಮಿಯೂ ಒಂದು ಆಲಯ. ಆದರೆ ಇದು ಬಯಲೊಳಗಿನ ಆಲಯ. ಬಯಲೊಳಗೆ ಭೂಮಿಯೊಂದೇ ಅಲ್ಲ, ಗ್ರಹ ನಕ್ಷತ್ರ ನೀಹಾರಿಕೆಗಳು ಅದೆಷ್ಟಿವೆಯೋ? ಬಲ್ಲೆನೆಂದವನಿಲ್ಲ. ಇದ್ದರೆ ಅವನ ಕಣ್ಣೇ ಅವನ ಮಿತಿ. ವಿಸ್ಮಯವೆಂದರೆ ಈ